ಓ ಎಸ್ ನಂಃ 57/2022
ಪಿ. ಡಬ್ಲ್ಯೂ-1

**(ಇಂದು ದಿನಾಂಕ 10-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಹೆಚ್ಚುವರಿ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಬಿ ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ.

**ಪಾಟೀಸವಾಲು: 3 ನೇ ಪ್ರತಿವಾದಿ ಪರ ಶ್ರೀ. ವಿ ಎಫ್ ಯು ವಕೀಲರಿಂದ**

ದಿಃ 25-07-2018 ರಂದು ಸಾಯಂಕಾಲ 5.30 ರ ಸಮಯದಲ್ಲಿ ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ ನನ್ನ ಪರವಾಗಿ ಮೃತ್ಯು ಪತ್ರ ಮಾಡಿದ್ದಾಳೆ ಎಂದರೆ ಸರಿ. 7 ನೇ ಪ್ರತಿವಾದಿ ಮಹೇಶ ನನ್ನ ಖಾಸಾ ತಮ್ಮ ಎಂದರೆ ಸರಿ. ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಖಂಡಿಕೆ 4 ರಲ್ಲಿ ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ ದಿಃ 25-07-2018 ರಂದು ಸಾಯಂಕಾಲ 5.25 ರ ಸಮಯದಲ್ಲಿ 7 ನೇ ಪ್ರತಿವಾದಿ ಮಹೇಶನ ಹೆಸರಿಗೆ ಮೃತ್ಯು ಪತ್ರ ಮಾಡಿದ್ದಾಳೆ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಖಂಡಿಕೆ 5 ರಲ್ಲಿ ನನ್ನ ತಮ್ಮನಿಗೆ 5.25 ರ ಸಮಯಕ್ಕೆ ಮಾಡಿಕೊಟ್ಟ ಮೃತ್ಯು ಪತ್ರಕ್ಕೆ ಲಕ್ಷ್ಮಣ ಅಂಜಣ್ಣಾ ಶಿವಮ್ಮನವರ ಮತ್ತು ಮಂಜುನಾಥ ಕರೆಪ್ಪ ಹುಡೇದ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಅಂತಾ ಬರೆದಿದ್ದೇನೆ ಎಂದರೆ ಸರಿ. ಆ ಸಾಕ್ಷಿದಾರರು ನನ್ನ ಪರವಾಗಿ ಮಾಡಿಕೊಟ್ಟ ಮೃತ್ಯು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ಲಕ್ಷ್ಮಣ ಅಂಜಣ್ಣಾ ಶಿವಮ್ಮನವರ ನವಲೂರು ಗ್ರಾಮದವನು ಎಂದರೆ ಸರಿ. ಸದರಿ ಲಕ್ಷ್ಮಣ ಅಂಜಣ್ಣಾ ಶಿವಮ್ಮನವರ ನನ್ನ ಹೆಸರಿಗೆ ಮಾಡಿಕೊಟ್ಟ ಮೃತ್ಯು ಪತ್ರವನ್ನು

ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ ಮರಣ ಹೊಂದಿದ 15 ದಿನಕ್ಕೆ ತಂದು ಕೊಟ್ಟಿದ್ದಾರೆ. ನಿಪಿ.4 ಮತ್ತು ನನ್ನ ತಮ್ಮ ಮಹೇಶ ಇತನ ಹೆಸರಿಗೆ ಮಾಡಿದ ಮೃತ್ಯು ಪತ್ರವನ್ನು ನಾವೇ ಸೃಷ್ಟಿ ಮಾಡಿಕೊಂಡಿದ್ದೇವೆ ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ 1 ಮತ್ತು 3 ನೇ ಪ್ರತಿವಾದಿಯ ಹೆಸರಿಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದಾಳೆ ನಮ್ಮ ಹೆಸರಿಗೆ ಯಾವುದೇ ಮೃತ್ಯು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.4 ನ್ನು ಮತ್ತು ನನ್ನ ತಮ್ಮನ ಹೆಸರಿಗೆ ಮಾಡಿಕೊಂಡಿರುವ ಮೃತ್ಯು ಪತ್ರಗಳು ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ ಇವರ ಮರಣದ ನಂತರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಶ್ರೀಮತಿ ಯಲ್ಲವ್ವ ಕೋಂ ಬುದ್ದಿವಂತಪ್ಪ ಶಿವಮ್ಮನವರ ಮರಣದ ನಂತರ 1 ಮತ್ತು 3 ನೇ ಪ್ರತಿವಾದಿಯರು ಅವಳ ಆಸ್ತಿಯನ್ನು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಂಡು ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.